ಇರುವ ಸುಮಾರು ೨,೫೦೦ ಅಡಿ ಎತ್ತರದ ಹಾದಿಯನ್ನು ಸವೆಸಲು ನಸುಕಿನಲ್ಲೇ ಚಾರಣವನ್ನು ಆರಂಭಿಸಬೇಕು. ಪಯಣದಿಂದ ಉಂಟಾಗುವ ಮನಸ್ಸಿನ ಖಿನ್ನತೆಯನ್ನು ನೀಗಲು ಮರಗಳಾಗಲೀ ಹಸಿರು ಪೈರಾಗಲಿ ಇಲ್ಲಿ ಎಲ್ಲೂ ಕಾಣುವುದಿಲ್ಲ. ಸುತ್ತಲೂ ಬರೀ ನಿರ್ಜನತೆಯೇ ಮರಗಟ್ಟಿರುತ್ತದೆ.


ಇಂಡೋ–ಟಿಬೆಟನ್ ಗಡಿ

**ಲಿಪು ಲೇಕ್ ಪಾಸ್:** ಚಾರಣದ ಈ ಮಗ್ಗಲು ಬಲು ಕಠಿಣವಾದುದು ಎಂದೇ ಹೇಳಬಹುದು. ನಡೆಯಬೇಕಾದ ದೂರವು ಕೇವಲ ೭ ಕಿಲೋ ಮೀಟರುಗಳಾದರೂ ಪ್ರಪಾತಗಳ ಹಾದಿಯು ಪಯಣವನ್ನು ಬಹಳ ಪ್ರಯಾಸಕರವನ್ನಾಗಿ ಮಾಡುತ್ತದೆ. ಇದನ್ನು ದಾಟಿದ ನಂತರ ಯಾತ್ರಿಕರಿಗೆ ೨೭ ಕಿಲೋಮೀಟರುಗಳಷ್ಟಾದರೂ ದಾರಿ ನಡೆದ ಆಯಾಸದ ಭಾವನೆ! ಕೆಲವರಿಗೆ ಮೊಟ್ಟಮೊದಲ ಬಾರಿಗೆ, ಉಸಿರಾಡಲು ಇಲ್ಲಿ ತೊಂದರೆಯಾಗುತ್ತದೆ. ಗುಂಜಿ ಕ್ಯಾಂಪ್‌ನಲ್ಲಿ ವೈದ್ಯಕೀಯ ತಪಾಸಣೆಗೆ ಒಳಗಾದುದರ ಮಹತ್ವ ಈಗ ಅರಿವಿಗೆ ಬರುತ್ತದೆ.

ದಣಿವಾರಿಸಿಕೊಳ್ಳುವಾಗ ಕೆಲವರು ಪ್ರಕೃತಿಯನ್ನು ಆಸ್ವಾದಿಸುತ್ತಾರೆ. ಮತ್ತೆ ಕೆಲವರು ಸಂತೋಷದಿಂದ ಕುಣಿದು ಕುಪ್ಪಳಿಸುತ್ತಾರೆ. ಲಿಪು ಲೇಕ್ ಪಾಸ್‌ನ ಅಂಚಿನಲ್ಲಿ ಟಿಬೆಟಿಯನ್ ಕೂಲಿಗಳು ಯಾತ್ರಿಕರನ್ನು ಎದುರುನೋಡುತ್ತಿರುತ್ತಾರೆ. ಭಾರತದ ಕೂಲಿಗಳು ಸಾಮಾನುಗಳನ್ನು ಇವರಿಗೆ ಒಪ್ಪಿಸಿ ಹಿಂದಿರುಗುತ್ತಾರೆ. ಇಲ್ಲಿ ಟಿಬೆಟ್‌ನ ಮಾರ್ಗದರ್ಶಕ ಎದುರುಗೊಳ್ಳುತ್ತಾನೆ. **'ಭಾರತಮಾತಾ ಕಿ ಜೈ'** ಎಂದು ಘೋಷಣೆ ಹಾಕುತ್ತ ಯಾತ್ರಿಕರು ಗಡಿಯನ್ನು ದಾಟಲು ಚೀನಾ ದೇಶದ ಅಧಿಕಾರಿಗಳ ಅಪ್ಪಣೆಗಾಗಿ ಇಲ್ಲಿ ಕಾಯುತ್ತಾರೆ.

**ತಕ್ಲಾಕೋಟ್:** ಸೀಮಾರೇಖೆಯನ್ನು ದಾಟಿದ ಯಾತ್ರಿಕರು ಗಡಿಯಲ್ಲಿರುವ ವ್ಯಾಪಾರಿ ಸ್ಥಳವಾದ ತಕ್ಲಾಕೋಟನ್ನು ತಲುಪುತ್ತಾರೆ. ಕರ್ನಾಲಿ ನದಿಯ ಸುಂದರ ಕಣಿವೆಯ ಪ್ರದೇಶದಲ್ಲಿರುವ ಈ ಪಟ್ಟಣವು ಹಲವಾರು ಶತಮಾನಗಳಿಂದಲೂ ಭಾರತದೊಡನೆ ವ್ಯಾಪಾರೀ ಸಂಬಂಧವನ್ನು ಹೊಂದಿದೆ. ಕಸ್ಟಮ್ಸ್ ಮತ್ತು ಇಮಿಗ್ರೇಷನ್ನಿನ ನಿಯಮಗಳನ್ನು ಪೂರೈಸಿ ಬಂದು ಯಾತ್ರಿಕರು ತಮಗೆ ನಿಗದಿತವಾದ ಸ್ಥಳದಲ್ಲಿ ವಿಶ್ರಮಿಸುತ್ತಾರೆ. ಎರಡು ದಿನಗಳ ಕಾಲ ಅವರು ಇಲ್ಲಿರಬೇಕಾಗುತ್ತದೆ.

ಇಲ್ಲಿನ ರುಚಿಯಿಲ್ಲದ ಸಪ್ಪೆ ಊಟವು ಯಾತ್ರಿಗಳಿಗೆ ತಾಯ್ನಾಡಿನ ನೆನಪನ್ನು ತರುತ್ತದೆ. ಇದುವರೆಗೆ ಹಿಮಾಲಯದ ದಕ್ಷಿಣ ಮುಖದ ವೈಭವವನ್ನು ಅವರು ನೋಡಿದ್ದರು. ಈಗ ಮೊದಲ ಬಾರಿಗೆ ತಕ್ಲಾಕೋಟಿನಿಂದ ಅದರ ಉತ್ತರದ ಕಡೆಗಿನ ಮುಖವನ್ನು ಅವರು ನೋಡುತ್ತಾರೆ. ದೀರ್ಘ ವಿಶ್ರಾಂತಿಯ ನಂತರ ಚೀನಾದ ಕರೆನ್ಸಿಯಾದ ಯೆನ್ ಅನ್ನು ಪಡೆದುಕೊಳ್ಳುತ್ತಾರೆ. ತಮ್ಮ ಈ ಸಾಹಸಮಯ ಪ್ರಯಾಣವನ್ನು ಮುಂದುವರೆಸುವ ಮೊದಲು, ಮಾರುಕಟ್ಟೆಗೆ ಹೋಗಿ ಅವಶ್ಯಕ ವಸ್ತುಗಳನ್ನು ಖರೀದಿಸಿ ಬರುತ್ತಾರೆ.

ಅವರೀಗ ಖೆಚೋರನಾಥ ಮಂದಿರದ ಹಾದಿಯಲ್ಲಿದ್ದಾರೆ. ಅಲ್ಲಿಯ ದೇವತೆಗಳು ಶ್ರೀರಾಮ, ಲಕ್ಷ್ಮಣ ಮತ್ತು ಸೀತಾದೇವಿಯನ್ನು ಹೋಲುತ್ತದೆ ಎಂದು ಹಿಂದೂಗಳಿಗೆ ಅನಿಸಿದರೂ, ಬೌದ್ಧರು ಅವುಗಳನ್ನು ಬುದ್ಧನ ಪ್ರತೀಕಗಳೆಂದೇ ಭಾವಿಸುತ್ತಾರೆ. (ಮುಂದುವರೆಯುವುದು)


ತಕ್ಲಾಕೋಟ್

# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದ

ಕೆ.ಆರ್. ಮೋಹನ್



ಗೋವಿಂದ ಶ್ರೀನಿವಾಸ ವೆಲ್ಲಿಂಗ್ ಎಂಬುವವರು ಈ ಛಾಯಾಚಿತ್ರವನ್ನು ಸೆರೆಹಿಡಿದರು. ಅವರ ಸ್ಟುಡಿಯೊ ೧೯೭೦ ರ ತನಕ ಬೆಳಗಾವಿಯ ಕಂಟೋನ್‌ಮೆಂಟ್ ಪ್ರದೇಶದಲ್ಲಿ ಇತ್ತು. ಪ್ರಖರಕಣ್ಣುಗಳು, ಶುಭ್ರಮುಖ, ಕಾವಿ ವಸ್ತ್ರ ಮತ್ತು ಪೇಟ, ಲಾಂಗ್‌ಕೋಟ್, ಕಾಲಿನಲ್ಲಿ ಕೊಲ್ಹಾಪುರಿ ಚಪ್ಪಲಿ ಧರಿಸಿರುವ ಸ್ವಾಮೀಜಿಯವರ ಶಾಂತ ಮತ್ತು ಆರೋಗ್ಯಕರ ಶರೀರ – ಇವು ಈ ಚಿತ್ರದ ವೈಶಿಷ್ಟ್ಯಗಳು.



ಚಿತ್ರ : ೯

### ಛಾಯಾಚಿತ್ರ–೯

**ಈ** ಛಾಯಾಚಿತ್ರವನ್ನು ೧೮೯೨ರಲ್ಲಿ ಬೆಳಗಾವಿಯ "ಎಸ್. ಮಹಾದೇವ್ ಅಂಡ್ ಸನ್ಸ್" ಸ್ಟುಡಿಯೋದಲ್ಲಿ ತೆಗೆಯಲಾಯಿತು. ಸ್ವಾಮೀಜಿ ಒಡಪಟ್ಟಿಗೆ ಈ ಚಿತ್ರ ತೆಗೆಯಲು ಒಪ್ಪಲಿಲ್ಲ. ಗೃಹೀಭಕ್ತರಾದ ಶ್ರೀ ಹರಿಪದ ಮಿತ್ರ ಮತ್ತು ಅವರ ಶ್ರೀಮತಿಯವರ ಅವಿರತ ಪ್ರಯತ್ನ ಮತ್ತು ಪ್ರಾರ್ಥನೆಗಳ ಫಲವಾಗಿ ಕಡೆಯಲ್ಲಿ ಸ್ವಾಮೀಜಿ ಒಪ್ಪಿಗೆ ಕೊಟ್ಟರು.

### ಛಾಯಾಚಿತ್ರ–೧೦

ಈ ಛಾಯಾಚಿತ್ರವನ್ನು ಸುಮಾರು ೧೮೯೨ ರಲ್ಲಿ ತಿರುವನಂತಪುರದಲ್ಲಿ ತೆಗೆಯಲಾಯಿತು. ಸ್ವಾಮೀಜಿಯವರ ಭವ್ಯಾಕೃತಿಯನ್ನು ನೋಡಿ ಆಕರ್ಷಿತನಾದ ತಿರುವನಂತಪುರದ ರಾಜಕುಮಾರ ಮಾರ್ತಾಂಡವರ್ಮನು ಸ್ವತಃ ತಾನೇ ಈ ಚಿತ್ರವನ್ನು ತೆಗೆದನು ಎಂದು ಹೇಳಲಾಗಿದೆ. ಈ ರಾಜಕುಮಾರ ಒಳ್ಳೆಯ ಛಾಯಾಗ್ರಾಹಕ. ಅವನು ಈ ಛಾಯಾಚಿತ್ರವನ್ನು

ಚಿತ್ರ : ೧೦

